ಮಾರ್ಗವಾಗಿ ಸೊಗಾಲಕ್ಕೆ ; (3) ದೇಶಾವರದಿಂದ ಮಾಕಳಿಗೆ (4) ಬೆಳಕೆರೆಯಿಂದ ಕುಕ್ಕೂರು ಮಾರ್ಗವಾಗಿ ಮಾದಾಪುರಕ್ಕೆ.

ಶ್ರೀ ವಿ. ವೆಂಕಟಪ್ಪ.—ಒಂದೊಂದು ರಸ್ತೆಗೆ ಎಷ್ಟೆಷ್ಟು ಹಣ ಕೊಡಲಾಗಿದೆ ?

ಶ್ರೀ ಟಿ. ಚನ್ನಯ್ಯ.—ಒಟ್ಟು ನಾಲ್ಕು ರಸ್ತೆಗಳಿಗೆ ಒಟ್ಟು 50 ಸಾವಿರ ಮಂಜೂರು ಮಾಡಿದೆ. ಯಾವ ಯಾವ ರಸ್ತೆಗೆ ಎಷ್ಟೆಷ್ಟು ಕೊಡಬೇಕೆಂಬುದು ಆಯಾ ರಸ್ತೆಗಳ ಅಂದಾಜಿನ ವೆಚ್ಚವನ್ನನುಸರಿಸಿದೆ.

ಶ್ರೀ ವಿ. ವೆಂಕಟಪ್ಪ.—ಎಷ್ಟೆಷ್ಟು ಮೈಲಿ ತೆಗೆದು ಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಇಷ್ಟೇ ಮೈಲಿಯೆಂದು ಖಚಿತವಾಗಿ ಇಲ್ಲಿ ಹೇಳಲು ಸಾಧ್ಯವಿಲ್ಲ.

ಶ್ರೀ ವಿ. ವೆಂಕಟಪ್ಪ.—ಚಿಕ್ಕ ಮಾಲೂರಿನಿಂದ ಮಾಲೂರು ಪಟ್ಟಣಕ್ಕೆ ಎಷ್ಟು ಮೈಲಿಯಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಗೊತ್ತಿಲ್ಲದೆ ನಾಲ್ಕು ರಸ್ತೆಗಳಿಗೆ 50 ಸಾವಿರ ರೂಪಾಯಿ ಕೊಟ್ಟು ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಟಿ. ಚನ್ನಯ್ಯ.—ಈ ಹಣ ನದರಿ ರಸ್ತೆಗಳಲ್ಲಿ ಕಟ್ಟಿಸಬೇಕಾದ culverts ಮತ್ತು bridges ಇವುಗಳಿಗೂ ವಿನಿಯೋಗಿಸಬೇಕಾಗಿದೆ.

ಶ್ರೀ ವಿ. ವೆಂಕಟಪ್ಪ.—ರಸ್ತೆ ಮಾಡಬೇಕಾದರೆ ಮೈಲಿಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಇಷ್ಟೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಚಿಕ್ಕಮಾಲೂರಿನಿಂದ ಇಬ್ಬಲೂರಿಗೆ ಎಷ್ಟು ದೂರ ಆಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಹಾಗಿದ್ದರೆ, 40 ಮೈಲಿ ಇದ್ದರೆ ಅದಕ್ಕೆ 50 ಸಾವಿರ ರೂಪಾಯಿ ಕೊಟ್ಟರೆ ಅದರಿಂದ ಕೆಲಸ ನಡೆಯುತ್ತದೆಂದು ಸರ್ಕಾರದ ಉದ್ದೇಶವೆ ?

ಶ್ರೀ ಟಿ. ಚನ್ನಯ್ಯ.—Cart track ಇರುವ ರಸ್ತೆಗಳಿವೆ, ಪೊಥಲು ರಸ್ತೆಯಾದರೆ ಮುಂದೆ culverts; bridges ಇವುಗಳನ್ನು ಮಾಡಬಹುದು. ಮುಖ್ಯವಾಗಿ ರಸ್ತೆಯಾಗಬೇಕೆಂಬುದು ಉದ್ದೇಶ.

ಶ್ರೀ ವಿ. ವೆಂಕಟಪ್ಪ.—ಎಷ್ಟು ಮೈಲಿ ಇದೆ, ಎಷ್ಟು ಖರ್ಚು ಮಾಡಬೇಕು ಈ ವರ್ಷ ಎಂಬ ಬಗ್ಗೆ ಅಂದಾಜೇ ಇಲ್ಲದೆ ಸುಮ್ಮನೆ 50 ಸಾವಿರ ಕೊಟ್ಟಿದ್ದೇವೆ ಎಂದರೆ ಹೇಗೆ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಮೊದಲೇ ಅಂದಾಜು ಮಾಡಿಸುತ್ತಾರೆ. ಆದರೆ ಈಗ ಹಣ ಮಂಜೂರಾಗಿರುವ ರಸ್ತೆಗಳ ಎಸ್ಟಿಮೇಟ್ ಇನ್ನೂ ತಯಾರಾಗಿಲ್ಲ. ಅಂದಾಜು ತಯಾರಾದ ಮೇಲೆ ಆಯಾ ರಸ್ತೆಗಳಿಗೆ ಒಟ್ಟು ಹಣದಲ್ಲಿ ಎಷ್ಟೆಷ್ಟು allocate ಮಾಡಬೇಕೆಂಬ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ವಿ. ವೆಂಕಟಪ್ಪ.—ಚಿಕ್ಕಮಾಲೂರು-ಮಾಲೂರು ಪಟ್ಟಣ ರಸ್ತೆಯೊಂದಕ್ಕೆ 1945ರಲ್ಲಿ 25 ಸಾವಿರ ರೂಪಾಯಿ ಮಂಜೂರಾಗಿತ್ತೆಂದು ತಮಗೆ ಗೊತ್ತಿದೆಯೆ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ, ನೋಟೀಸ್ ಬೇಕು.

Loans and grants to Municipalities.

Q.—55. Sri S. H. THAMMIAH *alias* HANUMANTHEGOWDARA THAMMIAH (Krishnarajanagar).—

Will the Government be pleased to state :—

(*a*) the number of municipalities in Mysore District to which Government have given money either as grants or loans for the past three years ;

(*b*) the municipalities which have not been sanctioned such grants and loans by Government even though they asked for it ?

A.—Sri T. CHANNIAH (Minister for Public Health and Local Self-Government).—

(*a*) 16.
(*b*) Nil.

ಶ್ರೀ ಎಸ್. ಎಚ್. ತಮ್ಮಯ್ಯ.—ಸರ್ಕಾರದವರು ಈ ಪೌರ ಸಭೆಗಳಿಗೆ ಸಹಾಯದ್ರವ್ಯ ಸಾಲ ಕೊಡುವ ಸಂದರ್ಭದಲ್ಲಿ ಏನು ರೀತಿ ನೀತಿಗಳನ್ನು ಅನುಸರಿಸುತ್ತಾರೆ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಆಯಾ ಮುನಿಸಿಪಾಲಿಟಿಯಿಂದ ಟೌನ್ improvement ಮಾಡುವುದಕ್ಕೆ ಬೇಕಾದಂಥ Resolutionನ್ನು ಸಂಬಂಧಪಟ್ಟ ಕೌನ್ಸಿಲ್‌ರವರು ಕಳುಹಿಸಿಕೊಡಬೇಕು. ಹೀಗೆ ಬಹಳ ಅವಶ್ಯಕತೆ ಇದೆ ಎಂಬುದಾಗಿ ಕೌನ್ಸಿಲ್ ಅವರು ಸರ್ಕಾರಕ್ಕೆ Resolution ಮಾಡಿ ಕಳುಹಿಸಿದ ಪಕ್ಷದಲ್ಲಿ priority ಕೊಟ್ಟು ಅದನ್ನು ಮಾಡಿಸಿ ಕೊಡುತ್ತೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಮೈಸೂರು ಜಿಲ್ಲೆಯಲ್ಲಿ ಯಾವ ಯಾವ ಪೌರಸಭೆಗಳಿಗೆ ಸಹಾಯದ್ರವ್ಯವನ್ನು ಸರ್ಕಾರದವರು ಕೊಟ್ಟಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಎಲ್ಲಾ ಪೌರ ಸಭೆಗಳಿಗೂ ಕೊಟ್ಟಿದ್ದೇವೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಎಷ್ಟೆಷ್ಟು ಕೊಟ್ಟಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಸಹಾಯದ್ರವ್ಯವನ್ನು ಗ್ರಾಂಟ್ ರೂಪದಲ್ಲಿಯೂ ಕೊಟ್ಟಿದೆ. ಅದು ಒಂದು ದೊಡ್ಡ ಲಿಸ್ಟ್ ಆಗುತ್ತದೆ. ಮಾನ್ಯ ಸದಸ್ಯರು ಅಪೇಕ್ಷಿಸಿದಲ್ಲಿ ತಿಳಿಸುತ್ತೇನೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಸಾಲ ತಮ್ಮಲ್ಲಿ ಯಾರೂ ತೆಗೆದುಕೊಳ್ಳದೆ ಇರತಕ್ಕಂಥ ಪೌರ ಸಭೆಗಳು ಮೈಸೂರು ಜಿಲ್ಲೆಯಲ್ಲಿ ಇವೆಯೇ ?

ಶ್ರೀ ಟಿ. ಚನ್ನಯ್ಯ.—ಸಾಲವನ್ನು ಎಲ್ಲರೂ ತೆಗೆದು ಕೊಂಡಿದ್ದಾರೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಸಾಲ ತೆಗೆದು ಕೊಳ್ಳದೆ ಇರುವ ಪೌರ ಸಭೆಗಳು ಇವೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ. ಚನ್ನಯ್ಯ.—ಅದು ಒಂದು ದೊಡ್ಡ ಪಟ್ಟಿ. ಬೇರೆ ಬೇರೆ ತಾರೀಖುಗಳಲ್ಲಿ ಸಾಲದ ರೂಪವಾಗಿ ಕೊಟ್ಟಿದ್ದೇವೆ. ಈ ಪೌರ ಸಭೆಗಳ water worksಗೆ ಬಹಳಮಟ್ಟಿಗೆ ಸಾಲದ ರೂಪವಾಗಿ ಕೊಟ್ಟಿದ್ದೇವೆ.

(ಶ್ರೀ ಟಿ. ಚನ್ನಯ್ಯ.)

ಯಾವ ಯಾವ ಮುನಿಸಿಪಾಲಟಿಗಳಿಗೆ ಕೊಟ್ಟಿದೆ ಎಂಬುದನ್ನು ಬೇರೆ ತಿಳಿಸುತ್ತೇನೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಮಿರ್ಲೇ ಮುನಿಸಿಪಾಲಿಟಿಯವರು ಸಾಲ ತಮ್ಮಲ್ಲಿ ತೆಗೆದುಕೊಂಡಿಲ್ಲ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಐದು ಸಾವಿರ ರೂಪಾಯಿ ಗಳನ್ನು ತೆಗೆದುಕೊಂಡಿದ್ದರು. ಆಮೇಲೆ ಬೇಕಾಗಿಲ್ಲ ಎಂದು ಅವರು ವಾಪಸ್ಸು ಮಾಡಿದರು.

ಶ್ರೀ ಎಸ್. ಎಚ್. ತಮ್ಮಯ್ಯ.—ಆ ಮುನಿಸಿಪಾಲಿಟಿಯವರು ಸಾಲ ಬೇಡ, ಗ್ರಾಂಟು ಬೇಕೆಂದು ಕೇಳಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಕೇಳಿದ್ದಾರೆ. ಸಾಮಾನ್ಯವಾಗಿ ನೀರಿನ ವ್ಯವಸ್ಥೆಗೆ ಸಾಲದ ರೂಪವಾಗಿ ಕೊಡುತ್ತೇವೆ, ಗ್ರಾಂಟು ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ತಿಳಿಸಿದ್ದೇವೆ.

Government Buildings in Corporation Area (Licences to build).

Q.—396. Sri M. PALANIYAPPAN (Ulsoor).—

Will the Government be pleased to state :—

whether it is necessary that they should obtain permission and sanction of plans for construction of Government buildings in the Corporation area ?

A.—Sri T. CHANNIAH (Minister for Public Health and Local Self-Government).—

No, when Government construct buildings in its sovereign capacity.

Sri M. PALANIYAPPAN.—Was there at any time any discussion in the Corporation regarding obtaining licences for Government buildings ?

Sri T. CHANNIAH.—Government are not aware of it.

Sri M. PALANIYAPPAN.—Is it not proper for the Government to consult the Corporation before they execute any buildings ?

Sri T. CHANNIAH.—It is not necessary.

Sri M. PALANIYAPPAN.—Sir, in view of the fact that too many buildings are unevenly shaped, as we see just before Vidhan Soudha, Telephone Exchange and Accountant General's Office, all in a confused manner, would it not be better for the Government scereafter to consult the Corporation ?

Mr. SPEAKER.—No argument is permitted.

Sri M. PALANIYAPPAN.—Who is the authority that gives the plan for constructing these Government buildings ?

Sri T. CHANNIAH.—The Government Architect.

Sri M. PALANIYAPPAN.—Who is to srutinise these plans ?

Sri T. CHANNIAH.—The Chief Engineer.

Sri M. PALANIYAPPAN.—Who is to scrutinise the plan of the buildings that the Central Government construct in this State ?

Sri T. CHANNIAH.—If the buildings belong to Central Government, they have got their own officers.

Mr. SPEAKER.—These supplementaries have gone beyond the scope of the question.

Sri R. ANANTARAMAN.—Is there any provision in the Corporation Act that the Government will have to obtain licence before a building is constructed by them ?

Sri T. CHANNIAH.—There is no such provision.

Sri R. ANANTARAMAN.—Is it not high time that a suitable provision is made in this regard ?

Sri T. CHANNIAH.—The construction of a building which is necessary for the due performance of the executive functions of the State under the Constitution must be regarded as a right conferred by the Constitution. This right cannot be curtailed or controlled by the Town Municipalities Act or the Corporation Act. Government need not obtain permission of the Corporation for constructing Government buildings.

Sri R. ANANTARAMAN.—Is it not better at least in future that the Government consult the Corporation before they take up a building for construction ?

Sri T. CHANNIAH.—As I said, this is unnecessary. Corporation is being kept informed of constructions of Government buildings in the Corporation limits.

Mr. SPEAKER.—Questions Nos. 24, 107 and 249 may be taken up together.